**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು– 01**

**ಸಂಖ್ಯೆ:ಎಂಸಿ4ಮಅಸಂಘೋ34/2010–11** **ದಿನಾಂಕ:29/06/2011**

**ಜ್ಞಾಪನಾ**

ವಿಷಯ:–ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ.

ಉಲ್ಲೇಖ:–1) ಸರ್ಕಾರದ ಅಧಿಸೂಚನೆ ಸಂಖ್ಯೆಇಡಿ4ಎಸ್ಎಂಸಿ 2005 ದಿನಾಂಕ11/09/2007 ಹಾಗೂ ತಿದ್ದುಪಡಿ ದಿನಾಂಕ23/10/2007.

2) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ5ಎಸ್ಎಂಸಿ2002 ದಿನಾಂಕ20/7/2004

3) ಸರ್ಕಾರದ ತಿದ್ದೋಲೆಸಂಖ್ಯೆಇಡಿ22ಎಂಪಿಎಸ್ 2005 ದಿನಾಂಕ12/12/2006

4) ಉಪನಿರ್ದೇಶಕರುಗಳಿಂದ ಬಂದಿರುವ ಪ್ರಸ್ತಾವನೆಗಳು

––000––

**ಪ್ರಸ್ತಾವನೆ :–**

ಮೇಲಿನ ಉಲ್ಲೇಖ(1)ರಿಂದ(3)ರವರೆಗಿನ ಸರ್ಕಾರಿ ಅಧಿಸೂಚನೆಗಳಲ್ಲಿ ಮತೀಯ ಅಲ್ಪಸಂಖ್ಯಾತರ ಆಡಳಿತ ಮಂಡಳಿಯವರು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ: 28/06/2011ರಂದು ಪರಿಶೀಲನಾ ಸಮಿತಿ ಸಭೆ ಸೇರಿ ಕೆಳಕಂಡ ಶಿಕ್ಷಣ ಸಂಸ್ಥೆಗಳ ದಾಖಲೆಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಕೆಳಕಂಡ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸುವ ಬಗ್ಗೆ ಕೆಲವೊಂದು ಷರತ್ತುಗಳನ್ನು ಅನ್ವಯಿಸಿ, ಸದರಿ ಷರತ್ತುಗಳನ್ನು ಪೂರೈಸಿರುವಂತಹ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸಲು ಸಮಿತಿಯು ತೀರ್ಮಾನಿಸಿ ಸಮ್ಮತಿಸಲಾಗಿದೆ.

**ಆದೇಶ :–**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರು ನಡೆಸುತ್ತಿರುವ ಶಾಲೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ. ಕಾಲಾನುಕಾಲಕ್ಕೆ ಮಾನ್ಯತೆಯನ್ನು ನವೀಕರಿಸುವ ಸಮಯದಲ್ಲಿ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಘೋಷಣೆ ಮಾಡಲಾದ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹಿಂತೆಗೆದುಕೊಳ್ಳಲಾಗುವುದು.

| ಕ್ರಮ ಸಂಖ್ಯೆ | ಶಿಕ್ಷಣ ಸಂಸ್ಥೆಯ ಹೆಸರು | ಧರ್ಮ | ಶಾಲೆಯ ಹೆಸರು ಮತ್ತು ವಿಳಾಸ |
|---|---|---|---|
| 1 | ಈಜಿಪುರ ಹೋಲಿಕ್ರೈಸ್ಟ್ ಎಜುಕೇಶನ್ ಸೊಸೈಟಿ, ಈಜಿಪುರ, ಬೆಂಗಳೂರು–47 | ಕ್ರಿಶ್ಚಿಯನ್ | ಹೋಲಿ ಕ್ರೈಸ್ಟ್ ಸ್ಕೂಲ್, (ಪ್ರೌಢಶಾಲೆ), ಈಜಿಪುರ, ಬೆಂಗಳೂರು–47 |
| 2 | ಅರ್ಸುಲೈನ್ ಫ್ರಾನ್ಸಿಸ್ಕನ್ ಎಜುಕೇಶನ್ ಸೊಸೈಟಿ, ಜನರಲೇಟ್, ಸಮರ್ಪಣ್ ದೇರಲಕಟ್ಟೆ ಅಂಚೆ, ಮಂಗಳೂರು | ಕ್ರಿಶ್ಚಿಯನ್ | ಸಂತ ಜೋಸೆಫರ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ. |
| 3 | ಕ್ವೀನ್ ಆಫ್ ಅಪೋಸ್ಟಲ್ಸ್ ಎಜುಕೇಶನ್ ಟ್ರಸ್ಟ್, ವಾಮಂಜೂರು ಮಂಗಳೂರು | ಕ್ರಿಶ್ಚಿಯನ್ | ಅಮರಜ್ಯೋತಿ ಆಂಗ್ಲ ಪ್ರೌಢಶಾಲೆ, ಸಿದ್ದಾಪುರ ರಸ್ತೆ, ಹಳೇಸೊರಬ, ಸೊರಬ ತಾ.. |
| 4 | ಶಂಷದ್ ಹೋಲಿ ಫೈತ್ ಎಜುಕೇಶನ್ ಸೊಸೈಟಿ, ಲಕ್ಕಸಂದ್ರ, ಬೆಂಗಳೂರು | ಮುಸ್ಲಿಂ | ಶಂಷದ್ ಹೋಲಿ ಫೈತ್ ಮಾಡ್ರನ್ ಆಂಗ್ಲ ಪ್ರೌಢಶಾಲೆ, ಲಕ್ಕಸಂದ್ರ, ಬೆಂಗಳೂರು |
| 5 | ಗುಲ್ಜಾರ್–ಇ–ಅದಬ್ ವಿದ್ಯಾ ಸಂಸ್ಥೆ, ಭಾಷಾನಗರ, ದಾವಣಗೆರೆ | ಮುಸ್ಲಿಂ | ಜಿ.ಕೆ.ಉರ್ದು ಹಿರಿಯ ಪ್ರಾಥಮಿಕ ಶಾಲೆ, ಭಾಷಾ ನಗರ, ದಾವಣಗೆರೆ |
| 6 | ಸೇವಾ ಎಜುಕೇಶನಲ್ ಟ್ರಸ್ಟ್, ನಂ.19, ಮಾಡ್ರನ್ ಲೇಔಟ್, 1ನೇ ಕ್ರಾಸ್, ದೇವರಜೀವನಹಳ್ಳಿ, ಬೆಂಗಳೂರು–45 | ಮುಸ್ಲಿಂ | ಮಾಡ್ರನ್ ಪಬ್ಲಿಕ್ ಸ್ಕೂಲ್ ದೇವರಜೀವನಹಳ್ಳಿ, ಬೆಂಗಳೂರು–45 |

| | | | |
|---|---|---|---|
| 7 | ದ ಮೇರಿ ಸಾಲಿಯಾನ್ ಸೊಸೈಟಿ, ಚಾಮರಜಪೇಟೆ, ಬೆಂಗಳೂರು–18 | ಕ್ರಿಶ್ಚಿಯನ್ | ಸ್ಟೆಲ್ಲಾ ಮೇರಿಸ್ ಪ್ರೌಢಶಾಲೆ, ತಿಪಟೂರು, ತುಮಕೂರು ಜಿಲ್ಲೆ. |
| 8 | ದಿ ಮೇರಿ ಸಾಲಿಯನ್ ಸೊಸೈಟಿ, ಸೇಂಟ್ ಮೇರಿಸ್ ಕಾನ್ವೆಂಟ್, ಚಾಮರಾಜಪೇಟೆ, ಬೆಂಗಳೂರು–18 | ಕ್ರಿಶ್ಚಿಯನ್ | ಸಂತ ತೆರೇಸಾ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ, ಚಾಮರಾಜಪೇಟೆ, ಬೆಂಗಳೂರು–18 (ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮ) |
| 9 | ನ್ಯೂ ನೋಬಲ್ ಎಜುಕೇಶನ್ ಸೊಸೈಟಿ, ಅರೇಬಿಕ್ ಕಾಲೇಜು ರಸ್ತೆ, ರಷೀದ್ ನಗರ, ನಾಗವಾರ, ಬೆಂಗಳೂರು–45 | ಮುಸ್ಲಿಂ | ನ್ಯೂ ನೋಬಲ್ ಹಿರಿಯ ಪ್ರಾಥಮಿಕ ಶಾಲೆ, 3ನೇಮುಖ್ಯರಸ್ತೆ, 5ನೇ ಅಡ್ಡರಸ್ತೆ, ರಷೀದ್ ನಗರ, ನಾಗವಾರ, ಬೆಂಗಳೂರು–45 |
| 10 | ನ್ಯೂ ನೋಬಲ್ ಎಜುಕೇಶನ್ ಸೊಸೈಟಿ, ಅರೇಬಿಕ್ ಕಾಲೇಜು ರಸ್ತೆ, ರಷೀದ್ ನಗರ, ನಾಗವಾರ, ಬೆಂಗಳೂರು–45 | ಮುಸ್ಲಿಂ | ನ್ಯೂ ನೋಬಲ್ ಆಂಗ್ಲ ಪ್ರೌಢಶಾಲೆ, 3ನೇಮುಖ್ಯರಸ್ತೆ, 5ನೇ ಅಡ್ಡರಸ್ತೆ, ರಷೀದ್ ನಗರ, ನಾಗವಾರ, ಬೆಂಗಳೂರು–45 |
| 11 | ಮುಸ್ಲಿಂ ಯೂತ್ ಫೆಡರೇಶನ್, 3ನೇಕ್ರಾಸ್, ಜಿ.ಪಿ.ರಸ್ತೆ, ಎ.ಪಿ.ಮೊಹಲ್ಲಾ, ಚಾಮರಾಜನಗರ–571313 | ಮುಸ್ಲಿಂ | ಎಂ.ವೈ.ಎಫ್. ಆಂಗ್ಲ ಮಾಧ್ಯಮ ಪ್ರೌಢಶಾಲೆ, 3ನೇಕ್ರಾಸ್, ಜಿ.ಪಿ.ರಸ್ತೆ, ಎ.ಪಿ.ಮೊಹಲ್ಲಾ, ಚಾಮರಾಜನಗರ–571313 |
| 12 | ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ ಆಫ್ ಕರ್ನಾಟಕ, ಹೋಲಿ ಏಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು–575002 | ಕ್ರಿಶ್ಚಿಯನ್ | ಸೇಂಟ್ ಜೆರೋಸಾ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ಜೆಪ್ಪು, ಮಂಗಳೂರು–2 |
| 13 | ಅಲ್ ಅಮೀನ್ ಎಜುಕೇಶನಲ್ ಸೊಸೈಟಿ, ಬೆಂಗಳೂರು | ಮುಸ್ಲಿಂ | ಅಲ್–ಅಮೀನ್ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಶ್ರೀನಿವಾಸಪುರ, ಕೋಲಾರ ಜಿಲ್ಲೆ |
| 14 | ಮುಸ್ಲಿಮ ಯೂತ್ ಫೆಡರೇಶನ್, 3ನೇಕ್ರಾಸ್, ಜಿ.ಪಿ.ರಸ್ತೆ, ಎ.ಪಿ.ಮೊಹಲ್ಲಾ, ಚಾಮರಾಜನಗರ–571313 | ಮುಸ್ಲಿಂ | ಎಂ.ವೈ.ಎಫ್.ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ, 3ನೇಕ್ರಾಸ್, ಜಿ.ಪಿ.ರಸ್ತೆ, ಎ.ಪಿ.ಮೊಹಲ್ಲಾ, ಚಾಮರಾಜನಗರ–571313 |
| 15 | ಸನ್ನಿದಾನ ಸೊಸೈಟಿ, ಎಸ್.ಎ.ಬಿ.ಎಸ್ ಸ್ಟಡಿ ಹೌಸ್, ಧರ್ಮಾರಾಂ ಅಂಚೆ, ಬೆಂಗಳೂರು | ಕ್ರಿಶ್ಚಿಯನ್ | ಸೆಂಟ್ ಥಾಮಸ್ ಶಾಲೆ, ಯಾರಂಡಹಳ್ಳಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಆನೆಕಲ್ ತಾ.. ಬೆಂಗಳೂರು–99 |
| 16 | ದಿವ್ಯ ಜ್ಯೋತಿ ಎಜುಕೇಶನಲ್ ಸೊಸೈಟಿ, ತರಬನಹಳ್ಳಿ, ಹೆಸರುಘಟ್ಟ ರಸ್ತೆ, ಬೆಂಗಳೂರು | ಕ್ರಿಶ್ಚಿಯನ್ | ಸೇಂಟ್ ಅಂಥೋನಿ ಪ್ರೌಢಶಾಲೆ, ತರಬನಹಳ್ಳಿ, ಹೆಸರುಘಟ್ಟ ರಸ್ತೆ, ಬೆಂಗಳೂರು |
| 17 | ಗುಡ್‌ವಿಲ್ ಎಜುಕೇಶನ್ ಸೊಸೈಟಿ, ಟ್ಯಾಂಕ್‌ಬಂಡ್ ರಸ್ತೆ, ಯಲಹಂಕ, ಬೆಂಗಳೂರು–64 | ಮುಸ್ಲಿಂ | ಗುಡ್‌ವಿಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಟ್ಯಾಂಕ್‌ಬಂಡ್ ರಸ್ತೆ, ಯಲಹಂಕ, ಬೆಂಗಳೂರು–64 |
| 18 | ಗುಡ್‌ವಿಲ್ ಎಜುಕೇಶನ್ ಸೊಸೈಟಿ, ಟ್ಯಾಂಕ್‌ಬಂಡ್ ರಸ್ತೆ, ಯಲಹಂಕ, ಬೆಂಗಳೂರು | ಮುಸ್ಲಿಂ | ಗುಡ್‌ವಿಲ್ ಪ್ರಾಥಮಿಕ ಶಾಲೆ, ಪುಟ್ಟೇನಹಳ್ಳಿ ರಸ್ತೆ, ಯಲಹಂಕ, ಬೆಂಗಳೂರು–64 |
| 19 | ಸಿಟಿಜನ್ ಎಜುಕೇಶನಲ್ ಟ್ರಸ್ಟ್, ಎಸ್.ನಂ.140/1, ಖುಬಾ ಮಸೀದಿ ಹಿಂಬಾಗ, ಕೆ.ಇ.ಬಿ.ಕಾಲೋನಿ, ಉದಯಗಿರಿ, ಮೈಸೂರು–19 | ಮುಸ್ಲಿಂ | ಸಿಟಿಜನ್ ಕಾನ್ವೆಂಟ್ ಹಿರಿಯ ಪ್ರಾಥಮಿಕ ಶಾಲೆ, ಎಸ್.ನಂ.140/1, ಖುಬಾ ಮಸೀದಿ ಹಿಂಬಾಗ, ಕೆ.ಇ.ಬಿ.ಕಾಲೋನಿ, ಉದಯಗಿರಿ, ಮೈಸೂರು |

**ಷರತ್ತುಗಳು**

1) ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ನೊಂದಣಿ ಕಾಯ್ದೆ ಪ್ರಕಾರ ನೊಂದಣಿಯಾಗಿರ ಬೇಕು. ಹಾಗೂ ಕಾಲಕಾಲಕ್ಕೆ ನವೀಕರಿಸಿರಬೇಕು.

2) ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಮತೀಯ ಅಲ್ಪಸಂಖ್ಯಾತರ ಸಂಖ್ಯೆ ಕನಿಷ್ಟ ಮೂರನೆ ಎರಡರಷ್ಟಿರಬೇಕು.

3) ಶಾಲೆಗಳನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

4) ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ

ಕಾಯ್ದೆಯಡಿಯಲ್ಲಿ ಇಲಾಖೆಯಿಂದ ನೊಂದಾಯಿಸಿರಬೇಕು, ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು. ಹಾಗೂ ಇತ್ತೀಚಿನ ಮಾನ್ಯತೆ ನವೀಕರಣ ಪತ್ರ ಹೊಂದಿರತಕ್ಕದ್ದು.

5) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ, ಆಯಾಯ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳನ್ನು ಕನಿಷ್ಟ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.

6.) ಶಾಲೆಗಳನ್ನು ನಡೆಸುತ್ತಿರುವ ಆಡಳಿತ ಮಂಡಳಿಯು ಆಯಾ ಮತೀಯ ಅಲ್ಪಸಂಖ್ಯಾತ(ಕ್ರಿಶ್ಚಿಯನ್, ಮುಸ್ಲಿಂ,ಜೈನ,ಬೌದ್ಧ, ಸಿಖ್) ರೆಂದು ಖಚಿತ ಪಡಿಸಿಕೊಳ್ಳತಕ್ಕದ್ದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು
21/6/11 29/6

ಪ್ರತಿಯನ್ನು

1. ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢಶಿಕ್ಷಣ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಉಪನಿರ್ದೇಶಕರು, (ಆಡಳಿತ),ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಗಳೂರು(ದ.ಕ) ಚಾಮರಾಜನಗರ, ಉಡುಪಿ, ತುಮಕೂರು, ದಾವಣಗೆರೆ, ಮೈಸೂರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು ಉತ್ತರಜಿಲ್ಲೆ, ಮಂಡ್ಯ, ಚಿಕ್ಕಮಗಳೂರು, ಶಿವಮೊಗ್ಗ, ಕೋಲಾರ ಇವರುಗಳಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಂಗಳೂರು ಉತ್ತರ ವಲಯ, ಮೈಸೂರು, ಬೆಂಗಳೂರು ದಕ್ಷಿಣವಲಯ, ಕೊಪ್ಪ, ತಿಪಟೂರು ಮಂಗಳೂರು, ದಾವಣಗೆರೆ, ತುಮಕೂರು, [illegible] ಶ್ರೀನಿವಾಸಪುರ, ಆನೇಕಲ್, ಚಾಮರಾಜನಗರ, ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
5. ಸಂಬಂಧಿಸಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6. ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7. ಕಛೇರಿ ಪ್ರತಿ